ಇ) ಈ ಎರಡು ವರ್ಷಗಳಲ್ಲಿ ಮೈಸೂರು ಸಕ್ಕರೆ ಕಾರ್ಖಾನೆಯ ರೈತರುಗಳಿಗೆ ಬೋನಸ್ ಹಣ–ವನ್ನೇನಾದರೂ ಪಾವತಿ ಮಾಡಿದ್ದೆಯೆ ?

ಈ) ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :–

ಅ)

ವರ್ಷ	ಕಬ್ಬು ಅರೆದ ಪ್ರಮಾಣ	ಉತ್ಪಾದಿಸಿದ ಸಕ್ಕರೆ (ಮೆ. ಟನ್‌ಗಳಲ್ಲಿ)
1988–89	5,63,050	57,416
1989–90	6,32,726	64,521

ಅ) ಕಾರ್ಖಾನೆಯು ದಿನಾಂಕ 1–10–87 ರಿಂದ 31–3–89 ರ ವರೆಗಿನ ಲೆಕ್ಕಪತ್ರಗಳ ಪ್ರಕಾರ ರೂ. 243.65 ಲಕ್ಷ ನಿವ್ವಳ ಲಾಭ ಗಳಿಸಿರುತ್ತದೆ. ಕಾರ್ಖಾನೆಯ ಹಿಂದಿನ ಸಾಲುಗಳಲ್ಲಿ ಅನುಭವಿಸಿದ್ದ ಒಟ್ಟು ಕೂಡಿಟ್ಟ ನಷ್ಟವು ರೂ. 328.64 ಲಕ್ಷದಿಂದ ರೂ. 69.99 ಲಕ್ಷಕ್ಕೆ ಇಳಿದಿರುತ್ತದೆ.

1989–90 ಕ್ಕೆ ಸಂಬಂಧಿಸಿದಂತೆ ಲಾಭ/ನಷ್ಟದ ತಃಖ್ತೆಗಳು ಇನ್ನೂ ಪೂರ್ಣಗೊಂಡಿರುವುದಿಲ್ಲ. ಇದರ ವಿವರಗಳು ಮಾರ್ಚ್ 1991 ರಲ್ಲಿ ಲಭ್ಯವಾಗಬಹುದೆಂದು ಅಶಿಸಲಾಗಿದೆ.

ಇ) ಪಾವತಿಸಿರುವುದಿಲ್ಲ.

ಈ) ಕಾರ್ಖಾನೆಯು 1–10–87 ರಿಂದ 31–3–90ರ ವರೆಗೆ ತಯಾರು ಮಾಡಿರುವ ಲೆಕ್ಕಪತ್ರಗಳ ಪ್ರಕಾರ ಪ್ರಾರಂಭದಲ್ಲಿದ್ದ ಹಿಂದಿನ ಕೂಡಿಟ್ಟ ನಷ್ಟವಾದ ರೂ. 328.64 ಲಕ್ಷಗಳು ಲೆಕ್ಕದ ವರ್ಷ ಕೊನೆಗೊಂಡಾಗ ರೂ. 69.99 ಲಕ್ಷಕ್ಕೆ ಇಳಿಮುಖವಾಗಿ ಈ ನಷ್ಟವನ್ನು 1989–90ರ ಸಾಲಿಗೆ ತೆಗೆದುಕೊಳ್ಳಲಾಗಿರುತ್ತೆ. ಕಾರ್ಖಾನೆಯ ಲೆಕ್ಕಪತ್ರಗಳು 1989–90ರ ಸಾಲಿಗೆ ಇನ್ನೂ ಪೂರ್ಣಗೊಂಡಿಲ್ಲದೇ ಇರುವುದರಿಂದ ಹಾಗೂ ಹಿಂದಿನ ನಷ್ಟ ಇನ್ನೂ ಮುಂದುವರೆಯುತ್ತಿರುವುದರಿಂದ ಬೋನಸ್ ಹಣ ಪಾವತಿ ಮಾಡಲಾಗಿರುವುದಿಲ್ಲ.

ವಿಷಯ :– ಮಸ್ಕಿ ನಾಲಾ ನೀರಾವರಿ ಯೋಜನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 484 (939)

ಶ್ರೀ ರಾಜಾ ಅಮರೇಶ್ವರ್ ನಾಯಕ್ (ಲಿಂಗಸುಗೂರು) :– ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಸ್ಕಿ ನಾಲಾ ನೀರಾವರಿ ಯೋಜನೆಯನ್ನು ಯಾವಾಗ ಮತ್ತು ಯಾರಿಂದ ಅಡಿಗಲ್ಲು ಸಮಾರಂಭವನ್ನು ನೆರವೇರಿಸಲಾಯಿತು ?

ಆ) ಈ ಯೋಜನೆಯ ಪ್ರಕಾರ ಎಷ್ಟು ಎಕರೆ ಜಮೀನಿಗೆ ನೀರೊದಗಿಸಲಾಗುವುದು ಮತ್ತು ಅದಕ್ಕೆ ತಗಲುವ ಪೆಚ್ಚವೆಷ್ಟು ?

ಇ) ಈ ನೀರಾವರಿ ಯೋಜನೆ ಯಾವಾಗ ಪೂರ್ತಿಗೊಳ್ಳುವುದು ಮತ್ತು ಇದಕ್ಕೆ ಸರ್ಕಾರ 1990–91 ನೇ ಸಾಲಿನಲ್ಲಿ ಎಷ್ಟು ಹಣವನ್ನು ತಾಯ್ವಿರಿಸಿದೆ ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :–

ಅ) ದಿನಾಂಕ 28–12–76 ರಂದು ಅಂದಿನ ಕರ್ನಾಟಕ ರಾಜ್ಯಪಾಲರಾದ ಮಾನ್ಯ ಶ್ರೀ ಉಮಾಶಂಕರ್ ದೀಕ್ಷಿತ್‌ರವರಿಂದ ನೆರವೇರಿಸಲ್ಪಟ್ಟಿದೆ.

ಆ) 2833 ಹೆಕ್ಟೇರುಗಳು ಮತ್ತು 1983–84 ನೇ ದರಪಟ್ಟಿಯ ಆಧಾರದ ಮೇಲೆ ಮಂಜೂರಾತಿಯಾದ ಪರಿಷ್ಕೃತ ಅಂದಾಜು ಮೌಲ್ಯ 1430 ಲಕ್ಷ ರೂ. ಗಳು.

೫) ಒಂಭತ್ತನೇ ಪಂಚವಾರ್ಷಿಕ ಯೋಜನೆಯಲ್ಲಿ ಪೂರ್ಣಗೊಳಿಸುವ ಉದ್ದೇಶವಿದೆ. 1990–91ನೇ ಸಾಲಿನಲ್ಲಿ ಬಂಡವಾಳ ಪೀಠಿಕೆಯಲ್ಲಿ ಅನುದಾನ ಒದಗಿಸಿರುವುದಿಲ್ಲ.

ವಿಷಯ :– ಮೈಸೂರು ಬಿತ್ತನೆ ಪ್ರದೇಶಕ್ಕೆ ಉತ್ತಮ ಗುಣಮಟ್ಟದ ರೇಷ್ಮೆ ಗೂಡು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 485 (855)

ಶ್ರೀ ಎಂ. ಎಸ್. ಆತ್ಮಾನಂದ (ಮಂಡ್ಯ) :– ಮಾನ್ಯ ರೇಷ್ಮೆ ಖಾತೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ. ?

1) ಮೈಸೂರು ಬಿತ್ತನೆ ವಲಯದಲ್ಲಿ ಉತ್ತಮ ಗುಣಮಟ್ಟದ ರೇಷ್ಮೆ ಗೂಡು ಉತ್ಪಾದಿಸಲು ಹಾಗೂ ಮೈಸೂರು ಬಿತ್ತನೆ ರೇಷ್ಮೆ ಗೂಡಿನ ಕೊರತೆ ನಿವಾರಿಸಲು ಯಾವ ಕ್ರಮವನ್ನು ಸರ್ಕಾರವು ಕೈಗೊಂಡಿದ್ದಾರೆ ?

2) ಫೆಬ್ರಿನ್ ರೋಗವು ಹೆಚ್ಚಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

3) ಹಾಗಿದ್ದಲ್ಲಿ ಈ ರೋಗ ನಿವಾರಣೆ ಮಾಡಲು ಸರ್ಕಾರದವರು ಕೈಗೊಂಡ ಕ್ರಮವೇನು ?

ಶ್ರೀ ವಿ. ಮುನಿಯಪ್ಪ (ರೇಷ್ಮೆ ಸಚಿವರು) :–

1. ಮೈಸೂರು ಬಿತ್ತನೆ ವಲಯದಲ್ಲಿ ಉತ್ತಮ ಗುಣಮಟ್ಟದ ಗೂಡು ಉತ್ಪಾದಿಸಲು ಕೆಳಕಂಡ ಕ್ರಮಗಳನ್ನು ತೆಗೆದುಕೊಂಡಿದೆ.

1) ಉತ್ತಮ ಗುಣಮಟ್ಟದ ರೋಗರಹಿತ ಮೊಟ್ಟೆಗಳನ್ನು ಸರ್ಕಾರಿ ಗ್ರೈನೇಜುಗಳಿಂದಲೇ ರೈತರಿಗೆ ಒದಗಿಸುವುದು.

2) ರೈತರಿಗೆ ಹೆಚ್ಚಿನ ರೀತಿಯಲ್ಲಿ ಹಿಪ್ಪುನೇರಳೆ ವ್ಯವಸಾಯ ಮತ್ತು ಹುಳು ಸಾಕಣೆಯಲ್ಲಿ ತಾಂತ್ರಿಕ ಸಲಹೆಗಳನ್ನು ಕೊಡುವುದು.

3) ಹುಳುಗಳಿಗೆ ರೋಗ ಬರದಂತೆ ಮುನ್ನೆಚ್ಚರಿಕೆ ಕ್ರಮವನ್ನು ತೆಗೆದುಕೊಳ್ಳುವುದು.

ಆ) ಪ್ರತಿ ಬೆಳೆಯ ನಂತರ ಹುಳು ಸಾಕಣೆ ಮನೆ ಮತ್ತು ಉಪಕರಣಗಳನ್ನು ಫಾರ್ಮಲಿನ್ ದ್ರಾವಣದಿಂದ ಶುದ್ಧೀಕರಿಸುವುದು.

ಆ) ಹುಳು ಸಾಕಣೆ ಕಾಲದಲ್ಲಿ ಹುಳುಗಳ ಮೈಮೇಲೆ ರೋಗಗಳು ಬರದಂತೆ ರೋಗ ನಿರೋಧಕಗಳನ್ನು ಸಿಂಪಡಿಸುವುದು. ತಿಳುವಳಿಕೆ ನೀಡಲಾಗುತ್ತಿದೆ.

4) ಪ್ರತಿ ಹಂತದಲ್ಲೂ ಹುಳುಗಳನ್ನು ಪರೀಕ್ಷಿಸಿ ಸೂಕ್ತ ಕ್ರಮ ಕೈಕೊಳ್ಳುವುದು.

5) ಊಜಿ ನೊಣದಿಂದ ರಕ್ಷಿಸಲು ನೈಲಾನ್ ಬಲೆಗಳನ್ನು ಉಪಯೋಗಿಸುವುದು.

6) ಬಿತ್ತನೆ ರೇಷ್ಮೆ ಗೂಡಿನ ಕೊರತೆಯನ್ನು ನಿವಾರಿಸಲು ಮಳೆಯಾಶ್ರಿತ ಹಿಪ್ಪುನೇರಳೆ ತೋಟಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸಲು ನೈರ್ಮಲ್ಯ ವಾತಾವರಣದಲ್ಲಿ ಹುಳು ಸಾಕಲು ಹುಳುಸಾಕಣೆ, ಮನೆ ಕಟ್ಟಲು ಹಾಗೂ ಹುಳು ಸಾಕಣೆಗೆ ಬೇಕಾದ ಉಪಕರಣಗಳನ್ನು ಕೊಳ್ಳಲು ಸಾಲಸೌಲಭ್ಯ ಒದಗಿಸುವ ಯೋಜನೆಯನ್ನು ಕೈಗೊಳ್ಳಬೇಕೆಂದು ಕಾರ್ಯಕ್ರಮ ಹಾಕಿಕೊಂಡಿದೆ.

	ಸಂಖ್ಯೆ	ಸಾಲ	ಸಹಾಯಧನ
1) ನೀರಾವರಿ ಸೌಲಭ್ಯ	632	252.800	75.900
2) ಹುಳು ಸಾಕುವ ಮನೆಕಟ್ಟಲು	740	148.000	43.950
3) ಉಪಕರಣ ಕೊಳ್ಳಲು	1264	63.20	18.970
ಒಟ್ಟು :	2636	464.00	138.820